ರಾಜಾಜಿನಗರದ 2ನೇ ಹಂತದ ಪ್ರದೇಶವಲ್ಲ ಸಿಂಗಲ್ ಫೋಲ್ ಟಿ ಸಿ ಗಳನ್ನು ಸ್ಥಳಾಂತರಿಸುವ ಬಗ್ಗೆ

ಪ್ರಶ್ನೆ ಸಂಖ್ಯೆ 47 (92) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ವಿದ್ಯುತ್ ಪ್ರಸರಣ ನಿಗಮದವರು ಬೆಂಗಳೂರು ನಗರದ ರಾಜಾಜಿನಗರ 2ನೇ ಹಂತದ ಪ್ರದೇಶದಲ್ಲಿ (ವಿಶಾಲ್ ಭವನದ ಇಹಂದೆ) ಹಲವಾರು ಸಿಂಗಲ್ ಪೋಲ್ ಟಿ ಸಿ ಗಳನ್ನು ಜನವಸತಿ ಮನೆಗಳ ಪಕ್ಕದಲ್ಲಿ ಸ್ಥಾಪಿಸಿರುವುದನ್ನು ಸ್ಥಳಾಂತರಿಸಬೇಕೆಂದು ಕೋರಿ ಎಷ್ಟು ದೂರುಗಳು ಬಂದಿವೆ, (ವಿವರಗಳನ್ನು ಒದಗಿಸುವುದು)

ಆ) ಈ ದೂರುಗಳ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಈ ಟಿ ಸಿ ಗಳನ್ನು ಕೂಡಲೇ ಸ್ಥಳಾಂತರಿಸಬೇಕೆಂದು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಮುಖ್ಯಮಂತ್ರಿಗಳು ಎರಡು ಬಾರಿ ಆದೇಶ ಮಾಡಿರುವುದು ನಿಜವಲ್ಲವೆ,

ಇ) ಮುಖ್ಯಮಂತ್ರಿಗಳ ಆದೇಶದ ಪ್ರಕಾರ ತಕ್ಷಣ ಕ್ರಮ ಕೈಗೊಂಡು ವರದಿಸಲ್ಲಿಸಬೇಕೆಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರು ದಿನಾಂಕ 22-01-2007 ರಂದು ಅಭಿಯಂತರರು, ಉತ್ತರ ವಿಭಾಗ ಇವರಿಗೆ ಸೂಚಿಸಿರುವುದು ನಿಜವಲ್ಲವೇ,

ಈ) ಹಾಗಿದ್ದಲ್ಲಿ ಈ ಬಗ್ಗೆ ಇಲ್ಲಿಯವರೆವಿಗೆ ಯಾವುದೇಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಮುಖ್ಯಮಂತ್ರಿಗಳ ಆದೇಶವನ್ನು ಧಿಕ್ಕರಿಸಿರುವ ಸಂಬಂದಪಟ್ಟ ಕಾರ್ಯನಿರ್ವಾಹಕ ಅಭಿಯಂತರರ ಮೇಲೆ ಶಿಸ್ತಿನ ಕ್ರಮ ಕೈಗೂಂಡು ಸಾರ್ವಜನಿಕ ಹಿತದೃಷ್ಟಿಯಿಂದ ಮೇಲ್ಕಂಡ ಟಿ ಸಿ ಗಳನ್ನು ಸ್ಥಳಾಂತರಿಸಲಾಗುವುದೇ,

ಶ್ರೀ ಹೆಚ್ ಡಿ ರೇವಣ್ಣ

ಅ) ಬೆಂಗಳೂರು ರಾಜಾಜಿನಗರ 2ನೇ ಹಂತದ ಪ್ರದೇಶದಲ್ಲಿ (ವಿಶಾಲ್ ಭನದ ಹಿಂದೆ) ಜನವಸತಿ ಮನೆಗಳ ಪಕ್ಕದಲ್ಲಿರುವ ವಿತರಣಾ ಪರಿವರ್ತಕ ಕೇಂದ್ರಗಳನ್ನು ಸ್ಥಳಾಂತರಿಸಬೇಕೆಂದು 2 ಅರ್ಜಿಗಳು / ದೂರುಗಳು ಬಂದಿವೆ ವಿವರಗಳು ಕೆಳಕಂಡಂತಿವೆ

1 ಶ್ರೀ ಹನುಮಂತೇಗೌಡ ಇವರು ದಿನಾಂಕ 19-10-2006 ರಂದು ಅರ್ಜಿ ನೀಡಿ ಅವರ ಖಾಲಿ ನಿವೇಶನದ ಮುಂದೆ ಇದ್ದ 4 ಕಂಬ ನಮೂನೆಯ 2 ಪರಿವರ್ತಕ ಕೇಂದ್ರಗಳನ್ನು ಸ್ಥಳಾಂತರಿಸಿ ಏಕಕಂಬ ರೂಪದ ಪರಿವರ್ತಕ ಕೇಂದ್ರಕ್ಕೆ ಪರಿವರ್ತಿಸಿಕೊಡಲು ಕೋರಿದ್ದರು ಅನಂತರ ಬೆವಿಕಂ ನಿಯಮಗಳ ಪ್ರಕಾರ ಅವರ ನಿವೇಶನದ ಮುಂದೆ ಅವರು ಕೋರಿರುವ ಸ್ಥಳದಲ್ಲಿ ಸ್ವಯಂ ಕಾಮಗಾರಿ ನಿರ್ವಹಣೆ ಅಡಿಯಲ್ಲಿ ಪರಿವರ್ತಕಗಳನ್ನು ಸ್ಥಳಾಂತರಿಸಿ ಕೆಲಸವನ್ನು ದಿನಾಂಕ 25-11-2006 ರಂದು ಪೂರ್ಣಗೊಳಿಸಲಾಯಿತು ಈ 2 ಪರಿವರ್ತಕಗಳಲ್ಲಿ 1 ಪರಿವರ್ತಕವನ್ನು ನಿವೇಶನದ ಮತ್ತೊಂದು ಬದಿಯಲ್ಲಿ ಅಳಡಿಸಲಾಗಿದ್ದು, ಸದ್ಯದಲ್ಲಿ ನಿವೇಶನದ ಈ ಭಾಗವು ಶ್ರೀಮತಿ ವಸಂತರಾಜ್ ಕೋಂ ರಾಜಗೋಪಾಲ್ ಇವರಿಗೆ ಸೇರಿರುತ್ತದೆ

2 ಶ್ರೀಮತಿ ವಸಂತರಾಜ್ ಕೋಂ ರಾಜಗೋಪಾಲ್‌ರವರು ದಿನಾಂಕ 3-1-2007 ರಂದು ದೂರು ನೀಡಿ ಅವರು ನಿರ್ಮಿಸುತ್ತಿರುವ ಮನೆಯ ಪಕ್ಕದಲ್ಲಿ ಈಗ ಸ್ಥಳಾಂತರಗೊಳಿಸಿ ನಿರ್ಮಿಸಲಾಗಿದ್ದ ಪರಿವರ್ತಕ ಕೇಂದ್ರವನ್ನು ಪಕ್ಕದಲ್ಲಿರುವ ಉದ್ಯಾನವನಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ ದಿನಾಂಕ 5-2-2007 ರಂದು ಆ ಕ್ಷೇತ್ರದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಸ್ಥಳ ಪರಿಶೀಲನೆ ನಡೆಸಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯ ಮೇರೆಗೆ ಹಾಗೂ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳ ಪ್ರಕಾರ ಕಟ್ಟಡ ಮತ್ತು ಬೆವಿಕಂ ವಿದ್ಯುತ್ ಮಾರ್ಗಗಳ ಮಧ್ಯೆ 12 ಮೀಟರ್ ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ಕಟ್ಟಡ ನಿರ್ಮಾಣ ಮಾಡಿಕೊಳ್ಳಲು ತಿಳಿಸಲಾಗಿರುತ್ತದೆ

ಆದರೆ, ಶ್ರೀಮತಿ ವಸಂತರಾಜ್ ರವರು ತಮ್ಮ ಕಟ್ಟಡದ ಮೊದಲನೆ ಮಹಡಿಯನ್ನು ಪರಿವರ್ತಕಕ್ಕೆ ಹತ್ತಿರದವರೆಗೆ ವಿಸ್ತರಿಸಿ ಕಟ್ಟಿರುತ್ತಾರೆ ಆದುದರಿಂದ ಮೇಲಿನ ಮಹಡಿ ಮತ್ತು ಪರಿವರ್ತಕದ ಮಧ್ಯದ ಸುರಕ್ಷಿತ ಅಂತರವು

ಕಡಿಮೆಯಾಗಿರುತ್ತದೆ ಅರ್ಜಿದಾರರು ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳನ್ನು ಅನುಸರಿಸದೆ ಕಟ್ಟಡವನ್ನು ನಿರ್ಮಿಸುತ್ತಿರುವುದರಿಂದ ಉಂಟಾಗಿರುವ ಸಮಸ್ಯೆಗೆ ದೂರು ನೀಡಿರುವ ಶ್ರೀಮತಿ ವಸಂತರಾಜ್‌ರವರೇ ಹೊಣೆಗಾರರಾಗಿರುತ್ತಾರೆ ಈ ಪರಿವರ್ತಕವನ್ನು ಬೇರೆಡೆಗೆ ಸ್ಥಳಾಂತರಿಸಲು ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದೆ ಕಾರಣ ಬೇರೆಡೆಗೆ ಸ್ಥಳಾಂತರಿಸಲು ಸಾಧ್ಯವಾಗುವುದಿಲ್ಲ

ಆ) ಹೌದು ನಿಜ

ಇ) ಹೌದು ನಿಜ

ಈ) ಪರಿವರ್ತಕವನ್ನು ಬೇರೆಡೆಗೆ ಸ್ಥಳಾಂತರಿಸಲು ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದ ಕಾರಣ ಈ ಪರಿವರ್ತಕ ಕೇಂದ್ರವನ್ನು ಸ್ಥಳಾಂತರಿಸಲು ಸಾಧ್ಯವಾಗಿಲ್ಲ

ಉ) ಈ ಪ್ರಕರಣದಲ್ಲಿ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮಗಳನ್ನು ಅನುಸರಿಸದೆ ಮತ್ತು ನಗರಪಾಲಿಕೆಯಿಂದ ಅನುಮೋದನೆಗೊಂಡ ನಕ್ಷೆಯ ಪ್ರಕಾರ ಕಟ್ಟಡವನ್ನು ನಿರ್ಮಿಸದೆ ಇರುವುದರಿಂದ ಉಂಟಾಗುವ ಸಮಸ್ಯೆಗಳಿಗೆ ಅರ್ಜಿದಾರರೇ ಸ್ವಯಂ ಹೊಣೆಗಾರರಾಗಿರುವುದರಿಂದ ಬೆ ವಿ ಕಂ ನ ಯಾವ ಅಧಿಕಾರಿಗಳ ವಿರುದ್ಧವೂ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಈ ಪರಿವರ್ತಕವನ್ನು ಸ್ಥಳಾಂತರ ಮಾಡಲೇ ಬೇಕಾದಲ್ಲಿ ಅದಕ್ಕೆ ಬೇಕಾದ ಸೂಕ್ತ ಸ್ಥಳವನ್ನು ಅರ್ಜಿದಾರರೇ ದೊರಕಿಸಿಕೊಡಬೇಕಾಗಿರುತ್ತದೆ ಹಾಗೂ ಅದಕ್ಕೆ ಸಂಬಂಧಿಸಿದ ಕಾಮಗಾರಿಯನ್ನು ಸ್ವಯಂ ಕಾಮಗಾರಿ ನಿರ್ವಹಣೆ ಯೋಜನೆಯಡಿಯಲ್ಲಿ ಅರ್ಜಿದಾರರೇ ನಿರ್ವಹಿಸಬೇಕಾಗುತ್ತದೆ ಸೂಕ್ತ ಸ್ಥಳಾವಕಾಶ ಲಭ್ಯವಿಲ್ಲದ ಕಾರಣ ಪರಿವರ್ತಕವನ್ನು ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗಿಲ್ಲ